ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site:** www.cescmysore.org.
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ : ಪ್ರವ್ಯ(ಆಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-2/2020-21/CYS-789 ದಿನಾಂಕ: 28 SEP 2020
ಲಗತ್ತು:

ಅಧೀಕ್ಷಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ವೃತ್ತ
ಚಾವಿಸನಿನಿ, ಚಾಮರಾಜನಗರ-ಕೊಡಗು
ಮೈಸೂರು/ಹಾಸನ/ಮಂಡ್ಯ.

**"ಅತಿ ಜರೂರು"**

ಅಧೀಕ್ಷಕ ಇಂಜಿನಿಯರ್(ವಿ),
ಪ್ರಸರಣ ವೃತ್ತ. ಕವಿಪ್ರನಿನಿ,
ಮೈಸೂರು/ಹಾಸನ.

ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ,
ಟಿ.ಎಲ್ ಅಂಡ್ ಎಸ್.ಎಸ್./ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ,

ಮಾನ್ಯರೆ,

ವಿಷಯ: 2021-22ನೇ ಸಾಲಿನಲ್ಲಿ ಚಾವಿಸನಿನಿ/ಕವಿಪ್ರನಿನಿ ಸೇವೆಯಿಂದ ವಯೋನಿವೃತ್ತಿ ಹೊಂದಲಿರುವ "ಸಿ" ಮತ್ತು "ಡಿ" ಗುಂಪಿನ ನೌಕರರುಗಳ ವಿವರಗಳನ್ನು ಒದಗಿಸುವ ಕುರಿತು.

ಉಲ್ಲೇಖ: ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರುರವರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ61/41503/2013-14 ದಿನಾಂಕ: 01.04.2014

*****

ಉಲ್ಲೇಖಿತ ಆದೇಶದಲ್ಲಿ ಎಸ್ಕಾಂ ಮತ್ತು ಕವಿಪ್ರನಿನಿ ಸೇವೆಯಿಂದ ವಯೋನಿವೃತ್ತಿ ಹೊಂದಲಿರುವ "ಸಿ" ಮತ್ತು "ಡಿ" ದರ್ಜೆಯ ನೌಕರರ ವಿವರಗಳನ್ನೊಳಗೊಂಡ ಅಧಿಸೂಚನೆಯನ್ನು ಕವಿಪ್ರನಿನಿ ನಿಗಮ ಕಾರ್ಯಾಲಯದಿಂದ ಪ್ರಕಟಿಸುವ ಬದಲಾಗಿ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ಪ್ರಕಟಿಸಲು ಆದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2021-22ನೇ ಸಾಲಿನಲ್ಲಿ ಚಾವಿಸನಿನಿ ಮತ್ತು ಚಾವಿಸನಿನಿ ವ್ಯಾಪ್ತಿಯ ಕವಿಪ್ರನಿನಿ ಕಛೇರಿಗಳಲ್ಲಿ ವಯೋನಿವೃತ್ತಿ ಹೊಂದಲಿರುವ "ಸಿ" ಮತ್ತು "ಡಿ" ಪದವೃಂದದ ನೌಕರರ ಸೇವಾ ಪುಸ್ತಕಗಳನ್ನು ಪರಿಶೀಲಿಸಿ ವಿವರವನ್ನು ಆಂತರಿಕ ತನಿಖೆಗೊಳಪಡಿಸಿ, ಸಂಬಂಧಿಸಿದ ಕಛೇರಿಗಳಿಂದ ವೃತ್ತ ಕಛೇರಿಗಳಿಗೆ ಸಲ್ಲಿಸುವಂತೆ ಹಾಗೂ ಕಾರ್ಯ ಮತ್ತು ಪಾಲನೆ ವೃತ್ತಗಳಿಂದ ವೃತ್ತ ವ್ಯಾಪ್ತಿಯ ಚಾವಿಸನಿನಿ/ಕವಿಪ್ರನಿನಿ ಕಛೇರಿಗಳಲ್ಲಿ ವಯೋನಿವೃತ್ತಿ ಹೊಂದಲಿರುವ "ಸಿ" ಮತ್ತು "ಡಿ" ನೌಕರರ ವಿವರವನ್ನು ಕ್ರೋಢೀಕರಿಸಿ ಕೆಳಕಂಡ ನಮೂನೆಯಲ್ಲಿ **ದಿನಾಂಕ: 05.10.2020 ರೊಳಗೆ ಚಾವಿಸನಿನಿ ನಿಗಮ ಕಛೇರಿಗೆ ಸಲ್ಲಿಸಲು ತಿಳಿಸಿದೆ.** ತಡವಾಗಿ ಸಲ್ಲಿಸಲು ಯಾವುದೇ ಅವಕಾಶವಿರುವುದಿಲ್ಲ. ನಿಗಮವು ಅಧಿಸೂಚನೆ ಮುಖಾಂತರ ಪ್ರಕಟಿಸುವ 2021-22ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದುವ ನೌಕರರ ಪಟ್ಟಿಯಲ್ಲಿ ಯಾವುದಾದರೂ ಹೆಸರು ಬಿಟ್ಟು ಹೋದಲ್ಲಿ, ಬಿಟ್ಟು ಹೋದ ನೌಕರರಿಗೆ ಸಂಬಂಧಿಸಿದ ನಿಯಂತ್ರಣ ಪ್ರಾಧಿಕಾರಿಯವರು ನೇರ ಹೊಣೆಗಾರರಾಗುವರು. ಆದುದರಿಂದ ತಮ್ಮ ವ್ಯಾಪ್ತಿಯಲ್ಲಿನ ವಿವರಗಳನ್ನು ಸೂಕ್ತವಾಗಿ ಪರಿಶೀಲಿಸಿ ನಿಗಮ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಪು.ತಿ.ನೋ

| ಕ್ರ. ಸಂ. | ನೌಕರರ ಹೆಸರು | ಪದನಾಮ | ಕಾರ್ಯನಿರ್ವಹಿಸುತ್ತಿರುವ ಸ್ಥಳ | ನೌಕರರ ಹುಟ್ಟಿದ ದಿನಾಂಕ | ನೌಕರರ ವಯೋನಿವೃತ್ತಿ ಹೊಂದುವ ದಿನಾಂಕ | ವಿಭಾಗ |
|---|---|---|---|---|---|---|
| | | | | | | |
| | | | | | | |

**ಸೂಚನೆ:** ವಯೋನಿವೃತ್ತಿ ಹೊಂದಲಿರುವ ನೌಕರರ ವಿವರಗಳನ್ನು email: gmhrd@cescmysore.org, agmahr@cescmysore.org ಈ ವಿಳಾಸಕ್ಕೆ Nudi 05 ಫಾಂಟ್(Font) ನ್ನು ಮಾತ್ರ ಬಳಸಿ ಇ-ಮೇಲ್ ಕಳುಹಿಸುವುದು.

ತಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು,(ಆ ಮತ್ತು ಮಾಸಂ)
ಚಾ.ವಿ.ಸ.ನಿ.ನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಇಂಜಿನಿಯರ್(ವಿ), ಮೈಸೂರು ವಲಯ, ಚಾವಿಸನಿನಿ, ಮೈಸೂರು/ಹಾಸನ ಇವರ ಮಾಹಿತಿಗಾಗಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು, ಎಂ.ಐ.ಎಸ್. ಶಾಖೆ, ನಿಗಮ ಕಛೇರಿ, ನಿಗಮದ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ.ನಿ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು
- ಹಿಸ-2/ಪ್ರ.ಕ.